ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು

ಮೂಡಿಗೆರೆ ಎಂ.ಜಿ.ಎಂ. ಆಸ್ಪತ್ರೆಯಲ್ಲಿರುವ ಡೆಂಟಲ್ ಯೂನಿಟ್

೩೪೪. ಶ್ರೀಮತಿ ಮೋಟಮ್ಮ (ಮೂಡಿಗೆರೆ):—ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮೂಡಿಗೆರೆ ಎಂ.ಜಿ.ಎಂ. ಆಸ್ಪತ್ರೆಗೆ ಡೆಂಟಲ್ ಯೂನಿಟ್ ಮಂಜೂರಾಗಿರುವುದು ಯಾವಾಗ ?

ಆ) ಈವರೆವಿಗೂ ಅಲ್ಲಿಗೆ ವೈದ್ಯಾಧಿಕಾರಿಯನ್ನು ನೇಮಿಸಿಲ್ಲದ್ದಕ್ಕೆ ಕಾರಣಗಳೇನು ? ಮತ್ತು ವೈದ್ಯಾಧಿಕಾರಿಗಳನ್ನು ನೇಮಿಸಲು ಕ್ರಮ ತೆಗೆದುಕೊಳ್ಳಲಾಗುವುದೆ ?

ಶ್ರೀಮತಿ ಮನೋರಮಾ ಮಾಧ್ವರಾಜ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು).—

೧) ೧೯೮೦ರಲ್ಲಿ

೨) ಕಳೆದ ೩-೪ ವರ್ಷಗಳಿಂದಲೂ ನೇಮಕಾತಿಗಳನ್ನು ರದ್ದುಗೊಳಿಸಿರುವ ಕಾರಣ ಸಹಾಯಕ ದಂತ ವೈದ್ಯರ ಹುದ್ದೆಯನ್ನು ಭರ್ತಿ ಮಾಡಲು ಸಾಧ್ಯವಾಗಿರುವುದಿಲ್ಲ.

ಚೆಂಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

೩೪೫. ಶ್ರೀ ಎಂ. ವೀರಪ್ಪಮೊಯ್ಲಿ.—ಸನ್ಮಾನ್ಯ ಉಪಾಧ್ಯಕ್ಷಣಿಯವರೆ, ದಿನಾಂಕ ೩-೪-೧೯೯೦ರ ಲಿಖಿತ ಮೂಲಕ ಉತ್ತರಿಸುವ ಮೊದಲನೇ ಪಟ್ಟಿಯಲ್ಲಿನ ೨೦ ಪ್ರಶ್ನೆಗಳ ಪೈಕಿ ಪ್ರಶ್ನೆಗಳ ಸಂಖ್ಯೆ ೩೬, ೩೯ ಮತ್ತು ೧೮೨ ಪ್ರಶ್ನೆಗಳನ್ನು ಹೊರತುಪಡಿಸಿ, ಇನ್ನುಳಿದ ೧೭ ಪ್ರಶ್ನೆಗಳ ಉತ್ತರಗಳನ್ನು ಸಭೆಯ ಮುಂದೆ ಮಂಡಿಸಿತ್ತೇನೆ.

ರಾಜ್ಯದಲ್ಲಿರುವ ಹುಲಿಗಳ ಸಂಖ್ಯೆಯ ಬಗ್ಗೆ

೩೪೬. ಶ್ರೀ ಜಿ. ರಾಜೂಗೌಡ (ಹನೂರು).— ಮಾನ್ಯ ಅರಣ್ಯ ಮತ್ತು ಪಶುಸಂಗೋಪನೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

೧) ನಾಗರಹೊಳೆ ಪ್ರದೇಶದಲ್ಲಿ ೧೯೮೯-೯೦ನೇ ಮಾರ್ಚ್‌ವರೆಗೆ ಇದ್ದ ಹುಲಿಗಳ ಸಂಖ್ಯೆ ಎಷ್ಟು?

೨) ಅವುಗಳಲ್ಲಿ ಗಂಡು ಮತ್ತು ಹೆಣ್ಣು ಹುಲಿಗಳ ಸಂಖ್ಯೆ ಎಷ್ಟು ?

೩) ಈ ರಾಜ್ಯದಲ್ಲಿ ಯಾವ ಯಾವ ಅರಣ್ಯ ಪ್ರದೇಶದಲ್ಲಿ ಎಷ್ಟೆಷ್ಟು ಹುಲಿಗಳಿವೆ ?

೪) ಕಳೆದ ೩ ತಿಂಗಳಲ್ಲಿ ನಾಗರಹೊಳೆ ಪ್ರದೇಶದಲ್ಲಿ ಹುಲಿಗಳು ಸತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ ಅದಕ್ಕೆ ಕಾರಣಗಳೇನು ?

ಶ್ರೀ ಬಿ. ಬಸವಲಿಂಗಪ್ಪ (ಅರಣ್ಯ ಮತ್ತು ಪಶುಸಂಗೋಪನೆ ಮಂತ್ರಿಗಳು).—

೧) ೨೧ ಹುಲಿಗಳು.

೨) ೮ ಗಂಡು ಹುಲಿಗಳು
೧೧ ಹೆಣ್ಣು ಹುಲಿಗಳು
೨ ಪುರಿ ಹುಲಿಗಳು

ಒಟ್ಟು ೨೧

ಸಿ) ಈ ರಾಜ್ಯದಲ್ಲಿ ಹುಲಿಗಳ ಸಂಖ್ಯೆ ಈ ಕೆಳಕಂಡಂತಿವೆ.—

ಮೈಸೂರು ವೃತ್ತ	— ೪೪
ಕೊಡಗು ವೃತ್ತ	— ೪೮
ಶಿವಮೊಗ್ಗ ವೃತ್ತ	— ೭೧
ಕೆನರ ವೃತ್ತ	— ೪೨
ಬೆಂಗಳೂರು ವೃತ್ತ	— ೨
ಬೆಳಗಾಂ ವೃತ್ತ	— ಇಲ್ಲ
ಪ್ರೊಜೆಕ್ಟ್ ಟೈಗರ್ ಬಂಡಿಪುರ	— ೫೦
ಒಟ್ಟು	೨೫೭

ಡಿ) ಕಳೆದ ೩ ತಿಂಗಳಲ್ಲಿ ೫ ಹುಲಿಗಳು ನಾಗರಹೊಳೆ ಪ್ರದೇಶದಲ್ಲಿ ಸತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಅವುಗಳಲ್ಲಿ ೪ ಹುಲಿಗಳು ಪರಸ್ಪರ ಕಾದಾಟದಿಂದ ಮತ್ತು ಇನ್ನೊಂದು ಪಲಮನರಿ ಡಿಸಫೆಕಶನ್ ಎಂಬ ಖಾಯಿಲೆಯಿಂದ ಸತ್ತಿರುವುದಾಗಿ ವರದಿಯಾಗಿದೆ.

ಆರೋಗ್ಯ ಕೇಂದ್ರಗಳನ್ನು ಸಮುದಾಯ ಆರೋಗ್ಯ ಕೇಂದ್ರಗಳಾಗಿ ಪರಿವರ್ತಿಸಿರುವ ಬಗ್ಗೆ

೧೫. ಶ್ರೀ ಬಿ. ರಮಾನಾಥ ರೈ (ಬಂಟ್ವಾಳ).— ಪ್ರಾಥಮಿಕ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಎ) ರಾಜ್ಯದಲ್ಲಿರುವ ಎಷ್ಟು ಆರೋಗ್ಯ ಕೇಂದ್ರಗಳನ್ನು ಸಮುದಾಯ ಕೇಂದ್ರಗಳನ್ನಾಗಿ ಪರಿವರ್ತಿಸಲಾಗಿದೆ?

ಬಿ) ಆ ಪೈಕಿ, ದಕ್ಷಿಣ ಕನ್ನಡ ಜಿಲ್ಲೆಯ ಮುಲ್ಕಿ ಮತ್ತು ಬಂಟ್ವಾಳ ಆರೋಗ್ಯ ಕೇಂದ್ರಗಳನ್ನು ಸಮುದಾಯ ಆರೋಗ್ಯ ಆಸ್ಪತ್ರೆಗಳಾಗಿ ಪರಿವರ್ತಿಸುವ ಜಿಲ್ಲಾ ಪರಿಷತ್ತಿನ ಶಿಫಾರಸ್ಸಿನ ಬಗ್ಗೆ ಸರ್ಕಾರ ದವರಂ ಕೈಗೊಂಡ ಕ್ರಮವೇನು?

ಸಿ) ಮೇಲಿನ ಶಿಫಾರಸ್ಸಿನಂತೆ ಬಂಟ್ವಾಳ ಆರೋಗ್ಯ ಕೇಂದ್ರವನ್ನು ಸಮುದಾಯ ಆಸ್ಪತ್ರೆಯಾಗಿ ಪರಿವರ್ತನೆ ಮಾಡದೆ ಇರಲು ಕಾರಣವೇನು?

ಶ್ರೀಮತಿ ಮನೋರಮಾ ಮಧ್ವರಾಜ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು).—

ಎ) ೧೨೬

ಬಿ) ೧) ಮುಲ್ಕಿಯಲ್ಲಿನ ಆಸ್ಪತ್ರೆಯನ್ನು ಸಮುದಾಯ ಆರೋಗ್ಯ ಕೇಂದ್ರವನ್ನಾಗಿ ಪರಿವರ್ತಿಸಲಾಗಿದೆ.

೨) ಬಂಟ್ವಾಳ ಆಸ್ಪತ್ರೆಯನ್ನು ಸಮುದಾಯ ಆರೋಗ್ಯ ಕೇಂದ್ರವನ್ನಾಗಿ ಪರಿವರ್ತಿಸುವ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ.

ಸಿ) ಮೇಲಿನ ಪ್ರಶ್ನೆಯಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.